ವಿಶೇಷ ಜಿಲ್ಲಾಧಿಕಾರಿಗಳು (ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ನಿರ್ಮಾಣ), ಬೃಹತ ನೀರಾವರಿ ಯೋಜನೆಗಳು, ಬೆಳಗಾವಿ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕ ಮತ್ತು ನೂಕ್ತ ಪರಿಹಾರದ ಹಕ್ಕು ಪುನರ್ವಸತಿ ಮತ್ತು ಪುನರ ನಿರ್ಮಾಣ ಕಾಯ್ದೆ 2013ರ
(ದಿನಾಂಕ: 01-01-2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ) ರೊಂದಿಗೆ ಓದಲಾದ ಕಲಂ11 (1) ರಲ್ಲಿ ಮಾಡಿದ ಅಧಿಸೂಚನೆ

ಸಂ:ಕಂ:ಭೂಸ್ವಾ: /ಕೆ3/36೯-04/18-19 ದಿನಾಂಕ: 19/03/2019

ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿದ ಜಮೀನುಗಳು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಬೀದರ ಜಿಲ್ಲೆ ಭಾಲ್ಕಿ ತಾಲೂಕಿನ ಬೆಟ್ಟಾ ಗ್ರಾಮದ ಜಮೀನು ಕಾರಂಜಾ ಯೋಜನೆಯಡಿಯಲ್ಲಿ ಬರುವ ಅತಿವಾಳ ಏತ ನೀರಾವರಿ ಉತ್ತರ ನಾಲಾ ಯೋಜನೆಯ ಕಾಮಗಾರಿಯ ನಿರ್ಮಾಣಕ್ಕಾಗಿ ಬೇಕಾಗುವ ಹೆಚ್ಚುವರಿ ಕ್ಷೇತ್ರದ ಜಮೀನು ಭೂ ಸ್ವಾಧೀನಪಡಿಸಿಕೊಳ್ಳಬೇಕಾಗುವದೆಂದು ಕರ್ನಾಟಕ ಸರಕಾರಕ್ಕೆ ಕಂಡು ಬಂದಿದೆ. ಹಾಗೂ ಸದರಿ ಯೋಜನೆಗಳೊಳಪಡುವ ವ್ಯಕ್ತಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿಪಾರದರ್ಶಕತೆ ಮತ್ತು ನೂಕ್ತ ಪರಿಹಾರದ ಹಕ್ಕು ಪುನರ್ವಸತಿ ಮತ್ತು ಪುನರ ನಿರ್ಮಾಣ ಕಾಯ್ದೆ 2013ರ(ದಿನಾಂಕ: 01-01-2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ) ಕಲಂ11 ರ ಸೌಲಭ್ಯದ ಮೇರೆಗೆ (ಕೇಂದ್ರದ 30ನೇ ಕಾಯ್ದೆ) ಕಲಂ 12 ರಡಿ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ವಿಶೇಷ ಜಿಲ್ಲಾಧಿಕಾರಿಗಳು (ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ನಿರ್ಮಾಣ), ಬೃಹತ ನೀರಾವರಿ ಯೋಜನೆಗಳು, ಬೆಳಗಾವಿ. ಇವರು ಈ ಮೂಲಕ ಕಾರ್ಯಪಾಲನೆ ಪ್ರಾಧಿಕಾರವನ್ನು ವಿಶೇಷ ಭೂಸ್ವಾಧೀನಾಧಿಕಾರಿ ಕಾರಂಜಾ ಯೋಜನೆ ಬೀದರ ಇವರಿಗೆ ನೀಡಲಾಗಿದೆ.

ಈ ಯೋಜನೆಗೆ ಸಂಬಂಧಿಸಿದಂತೆ ಭೂ ಸ್ವಾಧೀನಪಡಿಸಿಕೊಳ್ಳುತ್ತಿರುವ ಜಮೀನುಗಳಿಗೆ ಕೇಂದ್ರ ಸರಕಾರದ ಹೊಸ ಕಾಯ್ದೆ " ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರ್ವಸತಿ ಮತ್ತು ಪುನರ್ನಿರ್ಮಾಣ ಕಾಯ್ದೆ 2013"ರ ಕಲಂ 6(2) ರ ಅಡಿಯಲ್ಲಿ ನೀರಾವರಿ ಯೋಜನೆಗಳಿಗೆ ಕರ್ನಾಟಕ ಸರಕಾರದ ಪರಿಸರ ಮತ್ತು ಅರಣ್ಯ ಇಲಾಖೆಯ ದಿನಾಂಕ: 14-08-2014 ಅಧಿಸೂಚನೆಯನ್ವಯ ಪರಿಸರದ ಮೇಲಿನ ಪರಿಣಾಮ ನಿರ್ಧರಿಸುವ ಅಂಶ (Environment Impact assessment) ಮಾಡಬೇಕಾಗಿರುವುದರಿಂದ (Social Impact Assessment) ಅನ್ವಯಿಸುವುದಿಲ್ಲವೆಂದು ಸರ್ಕಾರವು ಆದೇಶ ಸಂಖ್ಯೆ ಕಂಇ/78/ ಭೂಸ್ವಾಧಿ/2014 ದಿನಾಂಕ: 12-08-2014 ರಲ್ಲಿ ಸ್ಪಷ್ಟೀಕರಿಸಿದೆ. ಹಾಗೂ ಈ ಯೋಜನೆಗೆ ಸಂಬಂಧಿಸಿದಂತೆ EIA/SIA ವರದಿಯು ಮುಖ್ಯ ಅಂಶಗಳನ್ನು ಕಲಂ 19ರ ಪ್ರಕಾರ ಅಧಿಸೂಚನೆ ಹೊರಡಿಸುವ ಮತ್ತು ಪ್ರಕಟಿಸಲು ಸರಕಾರವು ಪತ್ರ ಸಂಖ್ಯೆ ಕಂಇ/78/ಭೂಸ್ವಾಧಿ/ ದಿನಾಂಕ: 03-09-2014 ರಲ್ಲಿ ಸ್ಪಷ್ಟೀಕರಿಸಿದೆ. ಕೇಂದ್ರ ಸರಕಾರದ ಹೊಸ " ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ ನಿರ್ಮಾಣ ಕಾಯ್ದೆ 2013" ಕಾಯ್ದೆಯ ಕಲಂ 3(ಎ) ಹಾಗೂ 43(ಐ)ರನ್ವಯ ಪುನರವಸತಿ ಮತ್ತು ಪುನರ ನಿರ್ಮಾಣ ಕಾರ್ಯ ಅನುಷ್ಠಾನಗೊಳಿಸಲು ಎಲ್ಲಾ ಜಿಲ್ಲೆಗಳ ಆಡಳಿತಾಧಿಕಾರಿಗಳ ಹೊಸ ಹುದ್ದೆಗಳನ್ನು ಸೃಜಿಸುವವರೆಗೆ ತಾತ್ಕಾಲಿಕವಾಗಿ, ವಿಶೇಷ ಜಿಲ್ಲಾಧಿಕಾರಿಗಳು (ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ನಿರ್ಮಾಣ), ಬೃಹತ ನೀರಾವರಿ ಯೋಜನೆಗಳು, ಬೆಳಗಾವಿ. ಆಡಳಿತಾಧಿಕಾರಿ(Administrator) ಎಂದು ಅಧಿಕ ಪ್ರಭಾರದಲ್ಲಿರಿಸಿ ಸರಕಾರವು ಅಧಿಸೂಚನೆ ಸಂಖ್ಯೆ ಕಂಇ 56 ಭೂಸ್ವಾಬೆ 2013 ದಿನಾಂಕ: 02-04-2014 ರಲ್ಲಿ ಸ್ಪಷ್ಟೀಕರಿಸಿದ್ದು, ಈ ಭೂಸ್ವಾಧೀನಕ್ಕೆ ಸಂಬಂಧಪಟ್ಟ "ವಿಶೇಷ ಜಿಲ್ಲಾಧಿಕಾರಿಗಳು (ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ನಿರ್ಮಾಣ), ಬೃಹತ ನೀರಾವರಿ ಯೋಜನೆಗಳು, ಬೆಳಗಾವಿ ರವರು ಆಡಳಿತಾಧಿಕಾರಿಯಾಗಿರುತ್ತಾರೆ. 2013ರ ಕಾಯ್ದೆ ಕಲಂ 15(1) ರ ಮೇರೆಗೆ ಆಸಕ್ತಿ ಉಳ್ಳವರು ತಮ್ಮ ತಂಟೆ ತಕರಾರುಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನಗಳೊಳಗಾಗಿ ಈ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಬೇಕು ನಂತರ ಬಂದ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇಗೊಳಿಸಲಾಗುವುದು.

ಈ ಜಮೀನು ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರಕಾರದಿಂದ ನೇಮಿಸಲ್ಪಟ್ಟ ನೌಕರಿದಾರರಿಗಾಗಲೀ ಅಥವಾ ಈ ಕೆಲಸ ಮಾಡುವವರಿಗೆ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013ರ ಕಲಂ 11(1) ರ ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ , ಭೋಗ್ಯಕ್ಕೆ ಕೊಡುವ, ಅನುಭವಿಸುವ, ಋಣಭಾರ ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ, ಸದರಿ ಕಾಯ್ದೆ ಅನ್ವಯ ಭೂ ಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳ ಕಾರ್ಯಾಲಯ
ಕಾರಂಜಾ ಯೋಜನೆ ಬೀದರ
ದಿನಾಂಕ 9/8/19
ಆವಕ ಸಂಖ್ಯೆ

ಅಧಿಸೂಚನೆ

ಜಿಲ್ಲೆ: ಬೀದರ ತಾಲೂಕಾ ಭಾಲ್ಕಿ ಹೋಬಳಿ:ಖಟಕಚಿಂಚೋಳ್ಳಿ ಗ್ರಾಮ: ಚಿಟ್ಟಾ

ಎಲ್‌ಎಕ್ಯೂ:ಕೆಪಿ:ಸಿಆರ್- 29/2018-19

ಕ್ರ. ಸಂ	ಖಾತೆದಾರನ ಹೆಸರು ಮತ್ತು ಅಥವಾ ಗೇಣಿದಾರನ ಅಥವಾ ಹಿತಾಸಕ್ತಿ ಹೊಂದಿರುವ ವ್ಯಕ್ತಿಯ ಹೆಸರು	ಸರ್ವೆ ನಂ.	ಹಿಸ್ಸಾ ನಂ.	ವಿಸ್ತೀರ್ಣ ಎ.ಗುಂ	ಜಮೀನಿನ ತರಹ	ಚಕ್ಕುಬಂದಿ ಪೂರ್ವ ಸರ್ವೆನಂ.	ಪಶ್ಚಿಮ	ದಕ್ಷಿಣ ಸರ್ವೆ ನಮ.	ಉತ್ತರ ಸರ್ವೆ ನಂ.	ಆಕಾರ ಭೂ ಕಂದಾಯ (ರೂ.. ಪೈ)
1	2	3	4	5	6	7	8	9	10	11
1	ಶ್ರೀಮತಿ: ಸರಿತಾ ಗಂಡ ವಸಂತರಾವ	50	1	0–16	ಖುಷ್ಕಿ	48	50	51	50/8	8.98
2	ಶೆರಣಪ್ಪಾ ತಂದೆ ಶಿವರಾಯ	50	ಅ/3	0–15	ಖುಷ್ಕಿ	48	50	V.B	51	3.00
3	ಬಾಲಾಜಿ ತಂದೆ ದೆವಲತರಾವ	82	2	0–08	ಖುಷ್ಕಿ	89	V.B	V.B	81	9.54
4	ಸಂಪತಿಬಾಯಿ ಗಂಡ ತುಳಸಿರಾಮ ದೀಲಿಪ ತಂದೆ ಕೇರಬಾ	82	1	0–20	ಖುಷ್ಕಿ	89	V.B	V.B	81	39.36
5	ರಮೇಶ ತಂದೆ ಪರಭತರಾವ	82	1	0–22	ಖುಷ್ಕಿ	89	V.B	V.B	81	4.00
6	ಸಂಜೀವಕುಮಾರ ತಂದೆ ಕೇರಬಾ	82	1	0–18	ಖುಷ್ಕಿ	89	V.B	V.B	81	1.25
7	ಗುಜಾಬಾಯಿ ಗಂಡ ಭೀಮರಾವ	51	2	0–21	ಖುಷ್ಕಿ	48	52	55	50	10.33
	ಒಟ್ಟು			03–00						

PR No. 141
SC 25

([illegible])
ವಿಶೇಷ ಜಿಲ್ಲಾಧಿಕಾರಿಗಳು,
(ಭೂ. ಸ್ವಾ. ಮತ್ತು ಪುನರ್ವಸತಿ)
ಕೃಷ್ಣಾ ಮೇಲ್ದಂಡೆ ಯೋಜನೆ [illegible] ಬೀಳಗಿ